**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 359/2020 ಸಿ.ಡಬ್ಲೂ.23 ಪಿ.ಡಬ್ಲೂ.21

ದಿನಾಂಕ 18-12-2025
ಸತ್ಯ ಪ್ರತಿಜ್ಞೆಯ ಮೇರೆಗೆ

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಎ ಕೆ ವಕೀಲರಿಂದ:

ಸಾಮಾನ್ಯವಾಗಿ ಅಪಘಾತದ ಪ್ರಕರಣಗಳಲ್ಲಿ MVE ಯ ವರದಿಯನ್ನು ನೋಡಿದರೆ ಯಾವ ರೀತಿ ಅಪಘಾತ ಆಗಿರುತ್ತದೆ ಮತ್ತು ಅಪಘಾತಕ್ಕೆ ಕಾರಣ ಮತ್ತು ವಾಹನದ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬಹುದು ಎಂದರೆ ಸರಿ. ಅಪಘಾತದ ಸ್ಥಳದ ಬಗ್ಗೆ ಮತ್ತು ವಾಹನದ ಬಗ್ಗೆ ಮಾಹಿತಿ ಇಲ್ಲದೇ MVE ವರದಿಯನ್ನು ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ. 24 ನ್ನು ವಾಹನದ ಮತ್ತು ಅಪಘಾತದ ಬಗ್ಗೆ ಮಾಹಿತಿ ಪಡೆದುಕೊಳ್ಳದೆಯೇ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವರದಿ ನಿಪಿ. 24 ರಲ್ಲಿ ಅಪಘಾತದ ದಿನಾಂಕ ಮತ್ತು ಸ್ಥಳದ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿಯು ಪೋಲಿಸರು ಮಾಹಿತಿ ನೀಡದ ಕಾರಣ ನಮೂದಿಸಿರುವುದಿಲ್ಲ ಅಂತಾ ನುಡಿಯುತ್ತಾರೆ. ಸದರಿ ವಿಷಯವನ್ನು ನಮೂದಿಸದ ಕಾರಣ ನಿಪಿ. 24 ಅಪೂರ್ಣ ಇರುತ್ತದೆ ಎಂದರೆ ಸರಿಯಲ್ಲ. ವಾಹನಗಳನ್ನು ಪರೀಕ್ಷೆ ಮಾಡುವಾಗ ಸಾಮಾನ್ಯವಾಗಿ ವಾಹನಗಳ ಮೇಲೆ ಹಳೆಯ ಮತ್ತು ಹೊಸ ಜಖಂಗಳು ಕಂಡು ಬರುತ್ತವೆ ಎಂದರೆ ಸರಿ. ನಾನು ನನ್ನ ವರದಿಯಲ್ಲಿ ಹಳೆಯ ಮತ್ತು ಹೊಸ ಜಖಂಗಳು ಅಂತಾ ನಮೂದು ಮಾಡಿರುವುದಿಲ್ಲ, ಸಾಕ್ಷಿಯು ಮುಂದುವರೆದು ನನಗೆ ಏನು ಕಂಡು ಬಂದಿರುತ್ತದೆ ಅದನ್ನು ನಮೂದು ಮಾಡಿರುತ್ತೇನೆ ಅಂತಾ ನುಡಿಯುತ್ತಾರೆ. ನಿಪಿ. 24 ನ್ನು ನೋಡಿದಾಗ ಯಾವುದು ಹಳೆಯದು ಮತ್ತು ಯಾವುದು ಹೊಸದು ಜಖಂ ಆಗಿರುತ್ತದೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಒಂದು ವಾಹನದಲ್ಲಿ ಇರುವ ವಸ್ತುವಿನ ಮೇಲೆ ಸದರಿ ವಾಹನದ ಬ್ರೇಕ ಕಂಡಿಷನ ಅವಲಂಬಿತ ಆಗಿರುತ್ತದೆ ಎಂದರೆ ಸರಿಯಲ್ಲ. ವಾಹನಗಳನ್ನು ಸ್ಥಳಾಂತರ ಮಾಡುವಾಗ ನಿಪಿ. 24 ರಲ್ಲಿ ತಿಳಿಸಿದಂತಹ ಜಖಂಗಳು ಆಗಬಹುದು ಎಂದರೆ ಸರಿಯಲ್ಲ. ನಾನು ವಾಹನವನ್ನು ಪರಿಶೀಲನೆ ಮಾಡುವಾಗ ಭಾವಚಿತ್ರವನ್ನು ತೆಗೆದುಕೊಂಡಿರುವುದಿಲ್ಲ. ಸಾಮಾನ್ಯವಾಗಿ ಅಪಘಾತ ಆಗಬೇಕಾದರೆ ಅಪಘಾತಪಡಿಸಿದ ವಾಹನ ಮತ್ತು ಅದು ಚಲಿಸುತ್ತಿದ್ದ ರಸ್ತೆಯ ಮೇಲೆ ಅವಲಂಬಿತ ಆಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಸದರಿ ವಾಹನದಲ್ಲಿ ಏನು ಕಂಡು ಬಂದಿರುತ್ತದೆ ಅದನ್ನು ನಮೂದು ಮಾಡಿರುತ್ತೇನೆ, ಪ್ರತ್ಯೇಕವಾಗಿ ಗುರುತನ್ನು ಹೇಳಲು ನೆನಪು ಇರುವುದಿಲ್ಲ. ಸಾಮಾನ್ಯವಾಗಿ ವಾಹನಗಳನ್ನು ಸ್ಥಳಾಂತರ ಮಾಡುವಾಗ ಸದರಿ ವಾಹನದ ಮೇಕ್ಯಾನಿಕಲ ಕಂಡಿಷನ ಏರು ಪೇರು

ಆಗುವ ಸಂಭವ ಇರುತ್ತದೆ ಎಂದರೆ ಸರಿಯಲ್ಲ. ನಾನು ಅಪಘಾತದ ಬಗ್ಗೆ ತಿಳಿದುಕೊಳ್ಳದೇ ಮತ್ತು ವಾಹನವನ್ನು ಪರಿಶೀಲನೆ ಮಾಡದೇ ಸುಳ್ಳು ಮತ್ತು ಅಪೂರ್ಣ ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ:

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ